# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 985
2. ಸದಸ್ಯರ ಹೆಸರು : ಶ್ರೀ. ಕೆ.ಎ. ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿದವರು)
3. ಉತ್ತರಿಸಬೇಕಾದ ದಿನಾಂಕ : 24.02.2022.
4. ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ರಾಜ್ಯ ಸರ್ಕಾರ ರಾಜ್ಯದ ನಿವ್ವಳ ಆದಾಯದ ಶೇಕಡಾ 3 ಮತ್ತು 3.5 ಆಧಾರದ ಮೇಲೆ ಕಳೆದ 3 ವರ್ಷಗಳಲ್ಲಿ ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದಿರುವ ಸಾಲವೆಷ್ಟು; ಮತ್ತು ಯಾವ ಉದ್ದೇಶಕ್ಕೆ ಪಡೆದು ಬಳಸಿಕೊಳ್ಳಲಾಗಿದೆ; (ಪೂರ್ಣ ವಿವರ ನೀಡುವುದು)</td><td>2020-21 ಮತ್ತು 2021-22ನೇ ಸಾಲಿನ ಆಯವ್ಯಯದಲ್ಲಿ ರಾಜ್ಯ ಸರ್ಕಾರವು ವಿವಿಧ ಹಣಕಾಸು ಸಂಸ್ಥೆಗಳಿಂದ ಪಡೆದ ಸಾರ್ವಜನಿಕ ಸಾಲದ ವಿವರಗಳು ಈ ಕೆಳಕಂಡಂತಿದೆ:
<table>
<tr><th>ವರ್ಷ</th><th>ಒಟ್ಟು ಸಾರ್ವಜನಿಕ ಸಾಲದ ವಿವರ (ರೂ. ಕೋಟಿಗಳಲಿ)</th></tr>
<tr><td>2018-19</td><td>41,914.06</td></tr>
<tr><td>2019-20</td><td>50,459.01</td></tr>
<tr><td>2020-21</td><td>84,527.95</td></tr>
</table>
ರೂ. 84,527.95 ಕೋಟಿಗಳಲ್ಲಿ, ರೂ. 12,407 ಕೋಟಿಗಳ ಬ್ಯಾಕ್ ಟು ಬ್ಯಾಕ್ ಸಾಲ ಸೇರಿರುತ್ತದೆ. ಜಿ.ಎಸ್.ಟಿ. ನಷ್ಟ ಪರಿಹಾರದ ಕೊರತೆ ಬದಲಾಗಿ ಕೇಂದ್ರ ಸರ್ಕಾರವು ಸಾಲವನ್ನು ಪಡೆದು ರಾಜ್ಯ ಸರ್ಕಾರಕ್ಕೆ ಬ್ಯಾಕ್ ಟು ಬ್ಯಾಕ್ ಸಾಲದ ರೂಪದಲ್ಲಿ ನೀಡುತ್ತದೆ. ಸದರಿ ಸಾಲದ ಅಸಲು ಮತ್ತು ಬಡ್ಡಿ ಪಾವತಿಯನ್ನು ಕೇಂದ್ರ ಸರ್ಕಾರವು ಮಾಡುವುದಾಗಿ ತಿಳಿಸಲಾಗಿದೆ.<br>
ಸಾಮಾನ್ಯವಾಗಿ ರಾಜ್ಯ ಸರ್ಕಾರದ ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಬಂಡವಾಳ ಆಸ್ತಿ ಸೃಜಿಸಲು ಸಾಲವನ್ನು ಪಡೆಯಲಾಗುತ್ತದೆ.</td></tr>
<tr><td>ಆ</td><td>ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಕಳೆದ 3 ವರ್ಷಗಳಲ್ಲಿ ಜಿಎಸ್‌ಟಿ ಲುಕ್ಸಾನ ಸಲುವಾಗಿ ಪರಿಹಾರ ರೂಪದಲ್ಲಿ ನೀಡಬೇಕಾಗಿರುವ ಪರಿಹಾರವೆಷ್ಟು; ಹಾಗೂ ನೀಡಿದ ಪರಿಹಾರವೆಷ್ಟು; (ಪೂರ್ಣ ವಿವರ ನೀಡುವುದು)</td><td>ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಕಳೆದ 3 ವರ್ಷಗಳಲ್ಲಿ ಜಿ.ಎಸ್.ಟಿ. ನಷ್ಟ ಸಲುವಾಗಿ ಪರಿಹಾರ ರೂಪದಲ್ಲಿ ನೀಡಬೇಕಾಗಿರುವ ಪರಿಹಾರ ಹಾಗೂ ನೀಡಿದ ಪರಿಹಾರದ ವಿವರಗಳು ಕೆಳಕಂಡಂತಿದೆ.
<table>
<tr><td colspan="3">(ರೂ. ಕೋಟಿಗಳಲ್ಲಿ)</td></tr>
<tr><th>ವರ್ಷ</th><th>ನೀಡಬೇಕಾದ ಜಿ.ಎಸ್.ಟಿ. ಪರಿಹಾರ</th><th>ನೀಡಲಾದ ಜಿ.ಎಸ್.ಟಿ. ಪರಿಹಾರ</th></tr>
<tr><td>2018-19</td><td>11,600</td><td>10,754</td></tr>
<tr><td>2019-20</td><td>18,897</td><td>14,497</td></tr>
</table></td></tr>
</table>



Generated from eOffice by G JAGADEESHA, CMO-JS(GJ), JOINT SECRETARY, CMO on 23/02/2022 12:43 PM

<table>
<tr><td></td><td></td><td><table><tr><td>2020-21</td><td>31,889</td><td>13,789</td></tr></table></td></tr>
<tr><td>ಇ</td><td>ಕೇಂದ್ರ ಸರ್ಕಾರ ರಾಜ್ಯ ಸರ್ಕಾರಕ್ಕೆ ಜಿಎಸ್‌ಟಿ ಉಕ್ಸಾನ ಸಲುವಾಗಿ ನೀಡಬೇಕಾಗಿರುವ ಪರಿಹಾರವನ್ನು ರಾಜ್ಯ ಸರ್ಕಾರವೇ ಆರ್.ಬಿ.ಐ.ಯಿಂದ ನೇರವಾಗಿ ಸಾಲ ಪಡೆಯಲು ಮಾಡಿರುವ ವಿಶೇಷ ವ್ಯವಸ್ಥೆ ಯಾವುದು; ಈ ವಿಶೇಷ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದೊಂದಿಗೆ ರಾಜ್ಯದ ಪಾತ್ರವೇನು; (ಪಡೆದಿರುವ ಸಾಲದ ಮರು ಪಾವತಿ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರದೊಂದಿಗೆ ರಾಜ್ಯದ ಪಾತ್ರವೇನು; (ಪಡೆದಿರುವ ಸಾಲ ಒಳಗೊಂಡಂತೆ ವಿವರ ನೀಡುವುದು)</td><td>ಕೇಂದ್ರ ಸರ್ಕಾರವು ಜಿ.ಎಸ್.ಟಿ. ನಷ್ಟ ಪರಿಹಾರವನ್ನು ರಾಜ್ಯಕ್ಕೆ ನೀಡಲು ವಿಶೇಷ ವ್ಯವಸ್ಥೆಯಡಿಯಲ್ಲಿ ಆರ್.ಬಿ.ಐ ಇಂದ ಸಾಲ ಪಡೆದು ರಾಜ್ಯಗಳಿಗೆ ವರ್ಗಾಯಿಸಿದೆ. ಈ ಸಾಲವನ್ನು ಜಿ.ಎಸ್.ಟಿ. ಸೆಸ್ ಸಂಗ್ರಹಣೆಯಿಂದ ಕೇಂದ್ರ ಸರ್ಕಾರವೇ ಅಸಲು ಮತ್ತು ಬಡ್ಡಿಯ ಮರುಪಾವತಿ ಮಾಡಲಿರುತ್ತದೆ. ಈ ವಿಶೇಷ ಸಾಲದ ವ್ಯವಸ್ಥೆಯಲ್ಲಿ ಮರು ಪಾವತಿಯ ಹೊಣೆ ರಾಜ್ಯ ಸರ್ಕಾರಕ್ಕೆ ಇರುವುದಿಲ್ಲ. ಈ ವಿಶೇಷ ವ್ಯವಸ್ಥೆಯಲ್ಲಿ ರಾಜ್ಯಕ್ಕೆ ನೀಡಿರುವ ಸಾಲದ ವಿವರಗಳು ಈ ಕೆಳಕಂಡಂತಿದೆ.<br>
<table>
<tr><td colspan="2">(ರೂ. ಕೋಟಿಗಳಲ್ಲಿ)</td></tr>
<tr><td>ವರ್ಷ</td><td>ಜಿ.ಎಸ್.ಟಿ. ಪರಿಹಾರ ಸಾಲ</td></tr>
<tr><td>2020-21</td><td>12,407</td></tr>
<tr><td>2021-22</td><td>18,109</td></tr>
</table></td></tr>
<tr><td>ಈ</td><td>ಕೇಂದ್ರ ಸರ್ಕಾರ ಆರ್.ಬಿ.ಐ.ನಿಂದ ವಿಶೇಷ ವ್ಯವಸ್ಥೆಯಲ್ಲಿ ಸಾಲವನ್ನು ನೀಡಲು ವ್ಯವಸ್ಥೆ ಮಾಡಿದರೂ, ಈ ಸಾಲದ ಹೊರೆ ರಾಜ್ಯ ಸರ್ಕಾರದ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ-2002 ಮತ್ತು ಕರ್ನಾಟಕ ಸರ್ಕಾರಿ ಖಾತರಿಗಳ ಮೇಲಿನ ಮಿತಿ ಅಧಿನಿಯಮ-1999ರ ಅಡಿಯಲ್ಲಿರುವ ನಿಬಂಧನೆಗಳನ್ನು ಮೀರಿ ಜಿಡಿಪಿಯ ಶೇಕಡಾ 5 ಕ್ಕಿಂತ ಮಿಗಿಲಾದ ಸಾಲದ ಹೊರೆಯನ್ನು ರಾಜ್ಯ ಸರ್ಕಾರ ಹೊರುತ್ತಿಲ್ಲವೇ ಮತ್ತು ಮುಂದಿನ ದಿನಗಳಲ್ಲಿ ರಾಜ್ಯ ಸರ್ಕಾರ ತನ್ನ ಸಂಪನ್ಮೂಲಗಳ ಕೊರತೆಯನ್ನು ಸರಿದೂಗಿಸಲು ಹಣಕಾಸು ಸಂಸ್ಥೆಗಳಿಂದ ಸಾಲವನ್ನು ಪಡೆಯಬೇಕೆಂದರೆ ಅನ್ಯಮಾರ್ಗ ಇಲ್ಲವೆನ್ನುವುದು ರಾಜ್ಯ ಸರ್ಕಾರಕ್ಕೆ ಮನವರಿಕೆಯಾಗಿದೆಯೇ; ಹಾಗಿದ್ದಲ್ಲಿ.</td><td>ಕೋವಿಡ್-19ರ ಹಿನ್ನಲೆಯಲ್ಲಿ ರಾಜ್ಯದ ರಾಜಸ್ವ ಸಂಗ್ರಹಣೆಯಲ್ಲಿ ಕುಂಠಿತವಾಗಿರುತ್ತದೆ. ರಾಜ್ಯದ ಸರ್ಕಾರದ ಆಯವ್ಯಯದಲ್ಲಿ ಮಂಡಿಸಲಾಗಿದ್ದ, ಯೋಜನೆಗಳನ್ನು ಅನುಷ್ಠಾನಗೊಳಿಸಲು ಮತ್ತು ಬದ್ಧವೆಚ್ಚಗಳಾದ ವೇತನ, ಪಿಂಚಣಿ, ಹಿಂದಿನ ಸಾಲಗಳ ಅಸಲು ಮರು ಪಾವತಿ ಮತ್ತು ಬಡ್ಡಿ ಪಾವತಿಗಾಗಿ ಸಾಲವನ್ನು ಪಡೆಯಬೇಕಾದ ಪರಿಸ್ಥಿತಿ ಉಂಟಾಗಿರುತ್ತದೆ.<br>ಪ್ರಸ್ತುತ ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ-2002ರನ್ವಯ ರಾಜ್ಯದ ಜಿ.ಎಸ್.ಡಿ. ಪಿ. ಯ ಶೇ. 3ರ ಮಿತಿಯೊಳಗೆ ಸಾಲವನ್ನು ಪಡೆಯಲು ಅವಕಾಶವಿರುತ್ತದೆ.<br>ಜಿ.ಎಸ್.ಡಿ.ಪಿಯನ್ನು ವಾರ್ಷಿಕವಾರು ಅಂದಾಜಿಸಲಾಗುತ್ತದೆ. ಕೋವಿಡ್-19ರ ಪರಿಸ್ಥಿತಿಯಿಂದ ಆರ್ಥಿಕ ಚಟುವಟಿಗಳು ಕುಂಠಿತವಾದ ಕಾರಣ ಅಂದಾಜಿಸಿದ ಜಿ.ಎಸ್.ಡಿ.ಪಿ.ಯ ಪ್ರಗತಿ ಕಡಿಮೆಯಾಗಿರುತ್ತದೆ.<br>2021-22 ಸಾಲಿನಲ್ಲಿ ಕೋವಿಡ್-19ರ ಪರಿಸ್ಥಿತಿಯ ಹಿನ್ನಲೆಯಲ್ಲಿ ಕೇಂದ್ರ ಸರ್ಕಾರ, ಕರ್ನಾಟಕ ರಾಜ್ಯ ಸೇರಿದಂತೆ ಇತರೆ ರಾಜ್ಯದ ಸರ್ಕಾರಗಳು ಆರ್ಥಿಕ ಹೊಣೆಗಾರಿಕೆ ಅಧಿನಿಯಮಗಳಿಗೆ ತಿದ್ದುಪಡಿ ತಂದು ಹೆಚ್ಚುವರಿ ಸಾಲ ಪಡೆಯಲು ಅವಕಾಶ ಕಲ್ಪಿಸಿಕೊಂಡಿರುತ್ತವೆ.<br>ಅದರಂತೆ, 2021-22 ನೇ ಸಾಲಿಗೆ ರಾಜ್ಯ ಸರ್ಕಾರವು ಸಹ ಉಭಯ ಸದನಗಳ ಅನುಮೋದನೆ ಪಡೆದು ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮಕ್ಕೆ ತಿದ್ದುಪಡಿ ತಂದು ಜಿ.ಎಸ್.ಡಿ.ಪಿ.ಯ ಶೇ.4 ರವರೆಗೆ ಹೆಚ್ಚುವರಿ ಸಾಲ ಪಡೆಯಲು ಅವಕಾಶ ಕಲ್ಪಿಸಿಕೊಂಡಿರುತ್ತವೆ.<br>ಇತ್ತೀಚೆಗೆ ಆರ್ಥಿಕ ಚಟುವಟಿಕೆಗಳಲ್ಲಿ ಚೇತರಿಕೆ ಕಂಡು ಬಂದಿರುತ್ತದೆ. ಆದುದರಿಂದ ಆಯವ್ಯಯದಲ್ಲಿ ಅಂದಾಜಿಸಿರುವ ರಾಜಸ್ವ ಸ್ವೀಕೃತಿಯ ಗುರಿಯನ್ನು ತಲುಪುವ ಸಾಧ್ಯತೆಯಿರುವ ಹಿನ್ನಲೆಯಲ್ಲಿ, ಕರ್ನಾಟಕ ಆರ್ಥಿಕ ಹೊಣೆಗಾರಿಕೆ ಅಧಿನಿಯಮ-</td></tr>
</table>

| | | |
|---|---|---|
| | ಇಂತಹ ಸಂದಿಗ್ಧ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ಸರ್ಕಾರ ರೂಪಿಸಿರುವ ಕ್ರಮಗಳೇನು? (ವಿವರ ನೀಡುವುದು) | 2002ರನ್ವಯ ಶೇ 3.50 ರ ಮಿತಿ ಮೀರದಂತೆ ಸಾಲ ಪಡೆಯಲಾಗುವುದು. |

ಸಂಖ್ಯೆ: ಆಇ 16 ಬಿಜಿಎಲ್ 2022

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ



Generated from eOffice by G JAGADEESHA, CMO-JS(GJ), JOINT SECRETARY, CMO on 23/02/2022 12:43 PM